# ಜಾಮಿಯತುಲ್ ಹಿಂದ್ ಏಕ ಜಾಲಗ: **ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದ ಪ್ರಮುಖ ವಿಷಯಗಳು.**

ಕೋಝಿಕ್ಕೋಡ್: ಉನ್ನತ ಶಿಕ್ಷಣ ಬಯಸುವ ವಿದ್ಯಾರ್ಥಿಗಳು ವಿವಿಧ ಸಂಸ್ಥೆಗಳಿಗೆ ಭೇಟಿ ನೀಡುವ ಬದಲು ಒಂದೇ ಅರ್ಜಿ ಮತ್ತು ಪರೀಕ್ಷೆಯ ಮೂಲಕ ತಮ್ಮಿಷ್ಟದ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಜಾಮಿಯತುಲ್ ಹಿಂದ್ ಅಲ್ ಇಸ್ಲಾಮಿಯ್ಯಾ ಅವಕಾಶವನ್ನು ಒದಗಿಸುತ್ತಿದೆ.ವಿದ್ಯಾರ್ಥಿಗಳು www.jamiathulhind.com ವೆಬ್‌ಸೈಟ್ ಮೂಲಕ ಇದಕ್ಕಾಗಿ ಅರ್ಜಿ ಸಲ್ಲಿಸಬಹುದು.

## ಇತರ ಪ್ರಮುಖ ಸೂಚನೆಗಳು:

- ಅರ್ಜಿ ಸಲ್ಲಿಸುವ ಮೊದಲು, ಅರ್ಹತೆಗಳನ್ನು ಪೂರೈಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ.ಅರ್ಹತೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದವರು ನೇರವಾಗಿ ಜಾಮಿಯತುಲ್ ಹಿಂದನ್ನು ಸಂಪರ್ಕಿಸಬಹುದು.ಅರ್ಹತೆಗಳು, ಕೋರ್ಸ್‌ಗಳು,ಪ್ರವೇಶ ವಿಧಾನ, ಪ್ರವೇಶ ಪರೀಕ್ಷಾ ಕೇಂದ್ರಗಳು ಇತ್ಯಾದಿಗಳನ್ನು ಒಳಗೊಂಡಿರುವ ಪ್ರವೇಶ ಮಾರ್ಗದರ್ಶಿ

ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಮಲಯಾಳಂ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಲಭ್ಯವಿದೆ.

- ನಿಮ್ಮ ಹೆಸರು, ಜನ್ಮ ದಿನಾಂಕ ಮತ್ತು ವಾಟ್ಸಾಪ್ ಸಂಖ್ಯೆಯನ್ನು ಒದಗಿಸುವ ಮೂಲಕ ನೀವು ಮೊದಲು ರಿಜಿಸ್ಟರ್ ಮಾಡಬೇಕು.ವಾಟ್ಸಾಪ್ ಒಟಿಪಿ ಪರಿಶೀಲನೆ ಇರುತ್ತದೆ.ಅರ್ಜಿ ಐಡಿ ಮತ್ತು ಪಾಸ್‌ವರ್ಡನ್ನು ವಾಟ್ಸಾಪ್ ಮೂಲಕ ನೀಡಲಾಗುತ್ತದೆ ಮತ್ತು  ನೇರವಾಗಿ ಅರ್ಜಿ ಪುಟದಲ್ಲಿ ನಮೂದಿಸಲಾಗುವಂತದ್ದಾಗಿದೆ. ನಂತರ ವಿದ್ಯಾರ್ಥಿಯು ಪ್ರತಿ ಕಾಲಮನ್ನು ಎಚ್ಚರಿಕೆಯಿಂದ ಭರ್ತಿ ಮಾಡಬೇಕು.ವೈಯಕ್ತಿಕ ವಿವರಗಳನ್ನು ಭರ್ತಿ ಮಾಡಿದ ನಂತರ, ಸಂಸ್ಥೆಗಳು, ಕೋರ್ಸ್‌ಗಳು,ಪರೀಕ್ಷಾ ಕೇಂದ್ರ ಮತ್ತು ಪರೀಕ್ಷಾ ಮಾಧ್ಯಮವನ್ನು ಆಯ್ಕೆ ಮಾಡಬೇಕು.

- ವಿದ್ಯಾರ್ಥಿವೇತನಗಳು, ಫೆಲೋಶಿಪ್‌ಗಳು ಮತ್ತು ಇತರ ಸೃಜನಶೀಲ ಮತ್ತು ಶೈಕ್ಷಣಿಕ ಸಾಧನೆಗಳನ್ನು ಸಹ ವಿದ್ಯಾರ್ಥಿಗೆ ಸೇರಿಸಬಹುದು.ಇವೆಲ್ಲವುಗಳ ಪ್ರಮಾಣಪತ್ರಗಳನ್ನು ಹೊಂದಿರುವವರು ಮಾತ್ರ ಈ ಕಾಲಮ್‌ಗಳನ್ನು ಭರ್ತಿ ಮಾಡಬೇಕು.ಇಂಟರ್ವ್ಯೂ ಸಮಯದಲ್ಲಿ ಎಲ್ಲಾ ದಾಖಲೆಗಳು ಮತ್ತು ಪದಕಗಳನ್ನು ಸಲ್ಲಿಸುವವರನ್ನು ಮಾತ್ರ ಗ್ರೇಸ್ ಅಂಕಗಳಿಗೆ ಪರಿಗಣಿಸಲಾಗುತ್ತದೆ.

- ಅರ್ಜಿ ಶುಲ್ಕವನ್ನು ಆನ್‌ಲೈನ್ ಮುಖಾಂತರ ಪಾವತಿಸಬೇಕು.

- ಪ್ರವೇಶ ಪರೀಕ್ಷೆ ಮತ್ತು ಇಂಟರ್ವ್ಯೂ ಒಂದೇ ದಿನದಲ್ಲಿ ಒಂದೇ ಕೇಂದ್ರದಲ್ಲಿ ನಡೆಸಲಾಗುತ್ತದೆ. ಅರ್ಜಿ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಯು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಬೇಕು. ನಂತರ ಕೇಂದ್ರವನ್ನು ಬದಲಾಯಿಸಲಾಗುವುದಿಲ್ಲ.

- ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಆದ್ಯತೆಯ ಪ್ರಕಾರ ತನ್ನಿಷ್ಟದ ಹತ್ತು ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು.ರ್‍ಯಾಂಕ್ ಆಧಾರದ ಮೇಲೆ ಈ ಸಂಸ್ಥೆಗಳಿಗೆ ಪ್ರವೇಶವನ್ನು ನೀಡಲಾಗುತ್ತದೆ. ಮೊದಲ ಹಂಚಿಕೆಯ ನಂತರ, ಸಂಸ್ಥೆಗಳನ್ನು ಬದಲಾಯಿಸಿ ಆಯ್ಕೆ ಮಾಡಬಹುದು.ಸಂಸ್ಥೆಯನ್ನು ಆಯ್ಕೆ ಮಾಡುವ ಮುಂಚೆ ವಿದ್ಯಾರ್ಥಿಯು ಪ್ರಸ್ತುತ ಕ್ಯಾಂಪಸಿನ ಕುರಿತು ಎಲ್ಲಾ ಮಾಹಿತಿಯನ್ನು ತಿಳಿದಿರಬೇಕು.ಸಂಸ್ಥೆಗಳ ಕುರಿತು ಮೂಲ ಮಾಹಿತಿ ಜಾಮಿಯಾ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.  ಏಪ್ರಿಲ್ 30 ರವರೆಗೆ ಸಂಸ್ಥೆಗಳ ಆದ್ಯತೆಯ ಕ್ರಮವನ್ನು ವಿದ್ಯಾರ್ಥಿಗೆ ಎಡಿಟ್ ಮಾಡಬಹುದಾಗಿದೆ.

- ಹಾಲ್ ಟಿಕೆಟ್ ಮತ್ತು ಇತರ ಪ್ರಮುಖ ಮಾಹಿತಿಗಳು ವಿದ್ಯಾರ್ಥಿಗಳಿಗೆ ಏಕ ವಿಂಡೋ ಪೋರ್ಟಲ್ ಮೂಲಕ ಪ್ರತ್ಯೇಕವಾಗಿ ಲಭಿಸುತ್ತದೆ.ಪೋರ್ಟಲ್‌ನಲ್ಲಿ ಅಪ್ಲಿಕೇಶನ್ ಐಡಿ ಮತ್ತು ಪಾಸ್‌ವರ್ಡನ್ನು ನಮೂದಿಸುವ ಮೂಲಕ ಸೈನ್ ಇನ್ ಮಾಡಿ ಇವುಗಳನ್ನು ಪಡೆಯಬಹುದು.

## J-SAT ಪರೀಕ್ಷೆಗೆ ತಯಾರಿ ನಡೆಸುವ.

ಜಾಮಿಯಾ ಸ್ಕಾಲರ್ಸ್ ಆಪ್ಟಿಟ್ಯೂಡ್ ಟೆಸ್ಟ್ (J-SAT) ಆಧರಿಸಿಯಾಗಿದೆ ವಿದ್ಯಾರ್ಥಿಗಳಿಗೆ ಏಕ ವಿಂಡೋ ಪ್ರವೇಶ ದೊರೆಯುವುದು.ಲಿಖಿತ ಪರೀಕ್ಷೆಯ ಜೊತೆಗೆ ಅಭಿಮುಖ ಪರೀಕ್ಷೆಯೂ ಇರುತ್ತದೆ.ಇವೆರಡನ್ನೂ ವಿದ್ಯಾರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಆಯ್ಕೆ ಮಾಡಿದ ಕೇಂದ್ರದಲ್ಲಿ ನಡೆಸಲಾಗುತ್ತದೆ. ಲಿಖಿತ ಪರೀಕ್ಷೆಯ ಪ್ರಶ್ನೆಗಳು ಶೇಕಡಾ 75 ರಷ್ಟು ಶಾಲಾ ಪಠ್ಯಕ್ರಮ ಆಧಾರಿತ ಮತ್ತು ಶೇಕಡಾ 25 ರಷ್ಟು ಧಾರ್ಮಿಕ ಪ್ರಶ್ನೆಗಳಾಗಿರುತ್ತದೆ.ಮಾದರಿ ಪ್ರಶ್ನೆ ಪತ್ರಿಕೆಯು ಜಾಮಿಯತುಲ್ ಹಿಂದ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಪ್ಲಸ್ ಒನ್‌ಗೆ ಲಿಖಿತ ಪರೀಕ್ಷೆಯು 100 ಒಬ್ಜೆಕ್ಟಿವ್ ಪ್ರಕಾರದ ಪ್ರಶ್ನೆಗಳಾಗಿರುತ್ತದೆ.ಉತ್ತರಗಳನ್ನು OMR ಪತ್ರಿಕೆಯಲ್ಲಿ ದಾಖಲಿಸಬೇಕು. OMR ಪತ್ರಿಕೆಯಲ್ಲಿ ಹೇಗೆ ಉತ್ತರಿಸಬೇಕೆಂದು ವಿದ್ಯಾರ್ಥಿಯು ಪರೀಕ್ಷೆಯ ಮುಂಚೆಯೇ ಅರ್ಥಮಾಡಿಕೊಳ್ಳಬೇಕು.ಇದರ ಜೊತೆಗೆ,ವಿದ್ಯಾರ್ಥಿಯ ಸಾಹಿತ್ಯಿಕ ಮತ್ತು ಸೃಜನಶೀಲ ಸಾಮರ್ಥ್ಯವನ್ನು ಅಳೆಯಲು ಮೂರು ಧಾರ್ಮಿಕ ಪ್ರಶ್ನೆಗಳು ವಾಕ್ಯಾ ರೂಪದಲ್ಲಿ ಉತ್ತರಿಸಬೇಕಾಗುತ್ತದೆ.7 ಮತ್ತು 8 ನೇ ತರಗತಿಯ ವಿದ್ಯಾರ್ಥಿಗಳಿಗೆ 50 OMR ಪ್ರಶ್ನೆಗಳನ್ನು ಕೇಳಲಾಗುತ್ತದೆ.ಮುಂದುವರಿದು ನಡೆಯುವ ಇಂಟರ್ವ್ಯೂನಲ್ಲಿ

ವಿದ್ಯಾರ್ಥಿಯ ಓದುವ ಸಾಮರ್ಥ್ಯ ಮತ್ತು ಇತರ ಕೌಶಲ್ಯಗಳನ್ನು ನಿರ್ಣಯಿಸಲಾಗುತ್ತದೆ.ಅಂಕಪಟ್ಟಿಗಳು, ಹಿಫ್ಳ್ ಸರ್ಟಿಫಿಕೇಟ್ ಇಂಟರ್ವ್ಯೂ ವೇಳೆಯಲ್ಲಿ ಸಲ್ಲಿಸಬೇಕು.ಜಾಮಿಯಾ ಮಹರ್ಜಾನ್, SSF ಸಾಹಿತ್ಯೋತ್ಸವ, IAME ಫೆಸ್ಟ್ ಗಳು, ಶಾಲಾ ಕಲೋತ್ಸವಗಳು, ವಿದ್ಯಾರ್ಥಿವೇತನಗಳು ಇತ್ಯಾದಿಗಳಿಂದ ಪಡೆದ ಗ್ರೇಸ್ ಮಾರ್ಕ್ ಪ್ರಮಾಣಪತ್ರಗಳು ಸೇರಿದಂತೆ ಎಲ್ಲಾ ದಾಖಲೆಗಳ ಒರ್ಜಿನಲ್ ಪ್ರತಿ ಹಾಜರುಪಡಿಸಬೇಕು ಮತ್ತು ಇಂಟರ್ವ್ಯೂ

ನಡೆಸುವವರಿಗೆ ಮನವರಿಕೆ ಮಾಡಿಕೊಡಬೇಕು.

ಪರೀಕ್ಷೆ ಮತ್ತು ಇಂಟವ್ರ್ಯೂ ಸಂಬಂಧಿಸಿದ ಇತರ ಮಾಹಿತಿಯನ್ನು ಸೂಕ್ತ ಸಮಯದಲ್ಲಿ ಆನ್‌ಲೈನ್ ಪೋರ್ಟಲ್ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತದೆ.ಅದಕ್ಕಾಗಿ ಆನ್‌ಲೈನ್ ಪೋರ್ಟಲನ್ನು ಸಮಯೋಚಿತವಾಗಿ ಪರಿಶೀಲಿಸಬೇಕು ಎಂದು ತಿಳಿಸಲಾಗಿದೆ.

## ಕೋರ್ಸ್‌ಗಳು, ವಿವಿಧ ಸ್ಟ್ರೀಮ್‌ಗಳು

ಆಳವಾದ ಇಸ್ಲಾಮಿಕ್ ಅಧ್ಯಯನಗಳು ಮತ್ತು ಲೌಕಿಕ ಕ್ಷೇತ್ರದಲ್ಲಿ ಉನ್ನತ ಶಿಕ್ಷಣವನ್ನು ಸಂಯೋಜಿಸುವ ನವೀನ ಕೋರ್ಸ್‌ಗಳನ್ನಾಗಿದೆ ಜಾಮಿಯತುಲ್ ಹಿಂದ್ ಆಯೋಜಿಸುತ್ತಿರುವುದು.

ಶಾಲೆ ಏಳನೇ ಮತ್ತು ಹತ್ತನೇ ತರಗತಿಗಳನ್ನು ಪೂರ್ಣಗೊಳಿಸಿದವರಿಗಾಗಿದೆ ಈಗ ಏಕ ವಿಂಡೋ ಮೂಲಕ ಅರ್ಜಿ ಸಲ್ಲಿಸಲು ಅವಕಾಶ.

ಶಾಲಾ ಶಿಕ್ಷಣ ಏಳನೇ ತರಗತಿಯನ್ನು ಪೂರ್ಣಗೊಳಿಸಿದವರು ಮುಂದುವರಿದ ಸ್ಕೂಲ್ ಶಿಕ್ಷಣದ ಜೊತೆಗೆ ಪ್ಲಸ್ ಟು, ಡಿಗ್ರಿ, ಸ್ನಾತಕೋತ್ತರ, ಪಿಎಚ್‌ಡಿ ವರೆಗೂ ಪಾರಂಪರ್ಯ ರೀತಿಯ ದರ್ಸ್ ಫೌಂಡೇಶನ್‌ನಿಂದ ಮುತ್ತವ್ವಲ್ (ಪಿಜಿ) ವರೆಗೂ ಕಲಿಯಬಹುದು.ಹೆಚ್ಚಿನ ಅಧ್ಯಯನಕ್ಕೂ ಅವಕಾಶವಿದೆ.

ಶಾಲಾ ಶಿಕ್ಷಣ ಹತ್ತನೇ ತರಗತಿಯನ್ನು ಪೂರ್ಣಗೊಳಿಸಿದವರು ಪ್ಲಸ್ ಟು, ಡಿಗ್ರಿ, ಸ್ನಾತಕೋತ್ತರ, ಪಿಎಚ್‌ಡಿ ವರೆಗೂ ಪಾರಂಪರ್ಯ ರೀತಿಯ ದರ್ಸ್ ಫೌಂಡೇಶನ್‌ನಿಂದ ಮುತ್ತವ್ವಲ್ (ಪಿಜಿ) ವರೆಗೂ ಕಲಿಯಬಹುದು.ಹೆಚ್ಚಿನ ಅಧ್ಯಯನಕ್ಕೂ ಅವಕಾಶವಿದೆ.

ಧಾರ್ಮಿಕ ಅಧ್ಯಯನಕ್ಕಾಗಿ ಎಲ್ಲಾ ಸಂಸ್ಥೆಗಳು ಜಾಮಿಯತುಲ್ ಹಿಂದ್ ಪಠ್ಯಕ್ರಮವನ್ನಾಗಿದೆ ಅಳವಡಿಸಿಕೊಳ್ಳುತ್ತಿರುವುದು.ಲೌಕಿಕ ಶಿಕ್ಷಣಕ್ಕಾಗಿ ಸಂಸ್ಥೆಗಳು ವಿಭಿನ್ನ ವಿಧಾನಗಳನ್ನಾಗಿದೆ ಅಳವಡಿಸಿರುವುದು.ರೆಗ್ಯುಲರ್, ಡಿಸ್ಟೆಂಸ್,ಓಪನ್, ಪ್ರೈವೇಟ್ ,ಇಂಗ್ಲೀಷ್ ಮಾಧ್ಯಮ, ಇತರ ಭಾಷಾ ಮಾಧ್ಯಮ, ಕೇರಳ/ಕರ್ನಾಟಕ, CBSE, ಇತರ ಪಠ್ಯಕ್ರಮಗಳು, ವಿಭಿನ್ನ ವಿಶ್ವವಿದ್ಯಾಲಯಗಳು ಸೇರಿದಂತೆ

ಅನೇಕ ವೈವಿಧ್ಯತೆಯನ್ನು ಕ್ಯಾಂಪಸ್ ಗಳು  ನೀಡುತ್ತವೆ.

ಸೈನ್ಸ್ , ಕಾಮೆರ್ಸ್ ,ಹುಮ್ಯಾನಿಟೀಸ್ ಸೇರಿದಂತೆ ಪ್ರತಿಯೊಂದು ರಾಜ್ಯವು ನೀಡುವ ಹೈಯರ್ ಸೆಕೆಂಡರಿ/ಪ್ರೀ ಯೂನಿವರ್ಸಿಟಿ ಕೋರ್ಸ್‌ಗಳು ಮತ್ತು ಅವುಗಳ ವಿಭಿನ್ನ ಸಂಯೋಜನೆಗಳನ್ನು ಪ್ರತಿ ಸಂಸ್ಥೆಯಲ್ಲಿ ವಿಭಿನ್ನವಾಗಿ ನೀಡಲಾಗುತ್ತದೆ.ಡಿಗ್ರಿ-ಪಿಜಿ ಯ ಆಯ್ಕೆಗಳಲ್ಲಿಯೂ ಬದಲಾವಣೆಗಳಿವೆ.

ವಿದ್ಯಾರ್ಥಿ ಮತ್ತು ಪೋಷಕರು ಪ್ರತಿಯೊಂದು ಸಂಸ್ಥೆಯು ನೀಡುವ ಅಧ್ಯಯನ ವಿಧಾನವನ್ನು ಪ್ರತ್ಯೇಕವಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ಆಯಾ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ದೃಢೀಕರಿಸಬೇಕು.ಅರ್ಜಿ ಸಲ್ಲಿಸುವ ಸಮಯದಲ್ಲಿ ಸಂಸ್ಥೆಯನ್ನು ಆಯ್ಕೆ ಮಾಡುವಾಗ ಇದನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು.

## ಐವತ್ತಕ್ಕೂ ಹೆಚ್ಚು J-SAT ಪ್ರವೇಶ ಪರೀಕ್ಷಾ ಕೇಂದ್ರಗಳು

ಜಾಮಿಯತುಲ್ ಹಿಂದ್ ಅಲ್ ಇಸ್ಲಾಮಿಯಾ ಭಾರತದ ಒಳಗೆ ಮತ್ತು ಹೊರಗೆ ಐವತ್ತಕ್ಕೂ ಹೆಚ್ಚು ಪ್ರವೇಶ ಪರೀಕ್ಷಾ ಕೇಂದ್ರಗಳನ್ನು ವ್ಯವಸ್ಥೆ ಮಾಡಿದೆ. ಅರ್ಜಿ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಯು ತನ್ನ ಆಯ್ಕೆಯ ಕೇಂದ್ರವನ್ನು ಆರಿಸಿಕೊಳ್ಳಬೇಕು. ನಂತರ ಇದನ್ನು ಬದಲಾಯಿಸಲು ಯಾವುದೇ ಅವಕಾಶವಿರುವುದಿಲ್ಲ.

ಅಲ್ ಮಖರ್ ದಾರುಲ್ ಅಮಾನ್ ತಳಿಪರಂಬ್, ಮಖ್ದೂಮಿಯ್ಯಾ ಪಬ್ಲಿಕ್ ಸ್ಕೂಲ್ ನಿರ್ಮಲಗಿರಿ (ಕಣ್ಣೂರು), ಜಲಾಲಿಯಾ ಆಂಗ್ಲ ಮಾಧ್ಯಮ ಶಾಲೆ ಎಡವಣ್ಣಪ್ಪಾರ, ಜಾಮಿಯಾ ಹಿಕಮಿಯ್ಯ ಪಪ್ಪಿನಿಪಾರ (ಮಲಪ್ಪುರಂ), ಇರ್ಷಾದಿಯಾ ಕೊಳತ್ತೂರು (ಮಲಪ್ಪುರಂ), ಅಲ್ ಇಹ್ಸಾನ್ ವೇಂಜರ, ಮಅದಿನ್ ಪಬ್ಲಿಕ್ ಸ್ಕೂಲ್ ಸ್ವಲಾತ್ ನಗರ (ಮಲಪ್ಪುರಂ) ಸಿರಾಜುಲ್ ಹುದಾ ಆಂಗ್ಲ ಮಾಧ್ಯಮ ಶಾಲೆ ಕುಟ್ಯಾಡಿ,ಖಾದಿಸಿಯ್ಯಾ ಸ್ಕೂಲ್  ಫರೋಕ್, ಮರ್ಕಝ್ ಗಾರ್ಡನ್ ಪೂನೂರು, ಮರ್ಕಝ್ ಆಂಗ್ಲ ಮಾಧ್ಯಮ ಶಾಲೆ ಕಾರಂದೂರು, ದಾರುಲ್ ಮಆರಿಫ್ ಕೋಡಂಬುಝ, (ಕೋಝಿಕ್ಕೋಡ್), ತಬ್ಲೀಗುಲ್ ಇಸ್ಲಾಂ ಮದ್ರಸ ಕುನ್ನುಂಪುರಂ (ಆಲಪ್ಪುಝ), ಮರ್ಕಝ್ ಖೈಕಾ ಇನ್ಸಿಟ್ಯೂಟ್ ಬೆಂಗಳೂರು, ಸಯ್ಯಿದ್ ಮದನಿ ದರ್ಗಾ ಕಾಲೇಜು ಉಳ್ಳಾಲ (ದಕ್ಷಿಣ ಕನ್ನಡ), ಅನ್ವರುಲ್ ಹುದಾ

ಕ್ಯಾಂಪಸ್ ವಿರಾಜಪೇಟೆ (ಕೊಡಗು),ಅಲ್ ಇಹ್ಸಾನ್ ಮೂಳೂರು (ಕರ್ನಾಟಕ) ಅಶ್'ಅರಿಯ್ಯಾ ಚೆರನಲ್ಲೂರ್ (ಎರ್ನಾಕುಲಂ), ದಾರುಲ್ ಫತ್ತಾಹ್ ತೊಡುಪ್ಪುಝ (ಇಡುಕ್ಕಿ), ಸಅದಿಯ್ಯ ಕ್ಯಾಂಪಸ್ ದೇಲಿ (ಕಾಸರಗೋಡು), ಮುಹಿಮ್ಮಾತ್ ಕ್ಯಾಂಪಸ್ ಪುತ್ತಿಗೆ (ಕಾಸರಗೋಡು),ಖಾದಿಸಿಯ್ಯಾ ಇಸ್ಲಾಮಿಕ್ ಕಾಂಪ್ಲೆಕ್ಸ್ ಮುಖಾತಲ (ಕೊಲ್ಲಂ),ಝ್ಯುಥೂನ್ ಅಕಾಡೆಮಿ ಕವಡಿಯಾರ್ (ತಿರುವನಂತಪುರಂ), ಫಲಾಹ್ ಗ್ರೀನ್ ವ್ಯಾಲಿ ಸ್ಕೂಲ್ ಕಲ್ಪಟ್ಟ ಕೋಡ್ಡೋಣವಾ ಇಂಟರ್‌ನ್ಯಾಶನಲ್ ಸ್ಕೂಲ್ ಕಲ್ಲೆಕ್ಕಾಡ್ (ಪಾಲಕ್ಕಾಡ್), ಐಸಿಎಸ್ ಸ್ಕೂಲ್ ಒಟ್ಟಪಾಲಂ, ಸಲಾಹುದ್ದೀನ್ ಐಯೂಬೀ ವ್ರೋಲ್ರ್ಡ್ ಸ್ಕೂಲ್ ಪಾರಕ್ಕುಲಂ (ಪಾಲಕ್ಕಾಡ್)ಅಲ್ ಇರ್ಷಾದ್ ಇಂಗ್ಲೀಷ್ ಸ್ಕೂಲ್ ಚೆರುತುರುತಿ (ತ್ರಿಶೂರ್), ಇಸ್ರಾ ಕ್ಯಾಂಪಸ್ ವಾಡಾನಪಲ್ಲಿ (ತ್ರಿಶೂರ್) ಇವುಗಳಾಗಿವೆ  ಪ್ರಮುಖ ಪರೀಕ್ಷಾ ಕೇಂದ್ರಗಳು.ಇದಲ್ಲದೇ ದೆಹಲಿ, ಮುಂಬೈ, ಕೋಲ್ಕತ್ತಾದಂತಹ ನಗರಗಳಲ್ಲೂ ಪರೀಕ್ಷಾ ಕೇಂದ್ರಗಳಿವೆ.

ಮನಾಮಾ ಸುನ್ನೀ ಸೆಂಟರ್ (ಬಹ್ರೈನ್), ಮಹ್ದುಲ್ ಉಲೂಮ್ ಸ್ಕೂಲ್ (ಜಿದ್ದಾ ಸೌದಿ ಅರೇಬಿಯಾ), ರಿಸಾಲತುಲ್ ಇಸ್ಲಾಂ ಮದ್ರಸ (ಸೌದಿ ಅರೇಬಿಯಾ,ರಿಯಾದ್), ಇರ್ಷಾದ್ ಅವ್ಲಾದ್ ಮದ್ರಸಾ (ಖೋಬರ್, ಸೌದಿ ಅರೇಬಿಯಾ), ಖಾದಿಸಿಯ್ಯಾ ಮದ್ರಸ ( ಸೌದಿ ಅರೇಬಿಯಾ,ಖಾಮಿಸ್ ಮುಷೈತ್), ಅಲ್ ಹಿದಾಯ ಮದ್ರಸಾ (ದಮ್ಮಾಮ್ ಸೌದಿ ಅರೇಬಿಯಾ),ಐಸಿಎಫ್ ಫರ್ವಾನಿಯ್ಯಾ (ಕುವೈತ್) ಅಲ್ ಕೌಸರ್ ಮದ್ರಸಾ  (ರುವಿ, ಒಮಾನ್), ಅಲ್ ಫಲಾಹ್ ಮದ್ರಸ (ಬರ್ಕಾ, ಒಮಾನ್), ಸುನ್ನಿ ಜಮಾತುಲ್ ಮದ್ರಸ (ಸಲಾಲಾ, ಒಮಾನ್), ಅಲ್ ಹುದಾ ಮದ್ರಸ (ನಿಜ್ವಾ ಒಮಾನ್), ICF ಹಸನಿಯ್ಯಾ (ಕತರ್), ದುಬೈ ಮರ್ಕಝ್ (ದುಬೈ),  ಅಬ್ದುರ್ರಹ್ಮಾನುಬ್ನು ಓಫ್ ಮದ್ರಸ (ಶಾರ್ಜಾ) ಐಸಿಎಫ್ ಆಫೀಸ್ ಅಬುದಾಬಿ,ಕೇರಳ ಮುಸ್ಲಿಂ ಜಮಾಅತ್  ಮಸೀದಿ (ಕೋಲಾಲಂಪುರ್, ಮಲೇಷ್ಯಾ) ಇವೆಲ್ಲವಾಗಿದೆ ಭಾರತದ ಹೊರಗಿರುವ ಕೇಂದ್ರಗಳು.

## ಅಲೋಟ್ಮೆಂಟ್, ಅಡ್ಮಿಶನ್

ಜಾಮಿಯತುಲ್ ಹಿಂದ್ ಏಕಜಾಲಗ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳು ತಮ್ಮಿಷ್ಟದ ಸಂಸ್ಥೆಯಲ್ಲಿ ಅಧ್ಯಯನ ಮಾಡಲು ಅವಕಾಶ ಪಡೆಯುತ್ತಾರೆ. ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ

ಯ್ಯಾಂಕ್ ಮತ್ತು ಅರ್ಜಿ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳು ನೀಡುವ ಸಂಸ್ಥೆಗಳ ಆದ್ಯತೆಯ ಕ್ರಮವನ್ನು ಆಧರಿಸಿ ಪ್ರವೇಶಾತಿ ನೀಡಲಾಗುವುದು.

ವಿದ್ಯಾರ್ಥಿ ಕಲಿಯಲು ಹೆಚ್ಚು ಆಸಕ್ತಿ ಹೊಂದಿರುವ ಸಂಸ್ಥೆಯನ್ನು ಮೊದಲ ಆಯ್ಕೆಯಾಗಿ ನೀಡಬೇಕು.ಪ್ರಸ್ತುತ ಸಂಸ್ಥೆಯಲ್ಲಿ ಅಡ್ಮಿಶನ್ ಲಭಿಸದಿದ್ದಲ್ಲಿ ನಂತರ ಅಗತ್ಯವಿರುವ ಕ್ಯಾಂಪಸನ್ನು ಎರಡನೇ ಆಯ್ಕೆಯಾಗಿ ಮತ್ತು ಅದರ ನಂತರ ಕಲಿಯಲಿಚ್ಛಿಸುವ ಸಂಸ್ಥೆಯನ್ನು ಮೂರನೇ ಆಯ್ಕೆಯಂತೆ 10 ರವರೆಗೆ ಕ್ರಮವಾಗಿ ನೀಡಬಹುದು. ಯ್ಯಾಂಕ್ ಆಧಾರದ ಮೇಲೆ ಈ ಸಂಸ್ಥೆಗಳಲ್ಲೊಂದರಲ್ಲಿ ಪ್ರವೇಶ ಪಡೆಯಬಹುದು.ಪಡೆಯದಿದ್ದಲ್ಲಿ ಎರಡನೇ ಅಲೋಟ್ಮೆಂಟ್ ಮೂಲಕ ಪ್ರವೇಶ ನೀಡಲಾಗುತ್ತದೆ.ಅದರಲ್ಲೂ ಪಡೆಯದಿದ್ದರೆ, ಸ್ಪಾಟ್ ಅಲೋಟ್ಮೆಂಟ್ ಮೂಲಕ ಪ್ರವೇಶಾತಿ ನೀಡಲಾಗುತ್ತದೆ.

ವಿದ್ಯಾರ್ಥಿಗಳಿಗೆ ಮೊದಲ, ಎರಡನೇಯ ಮತ್ತು ಸ್ಪಾಟ್ ಅಲೋಟ್ಮೆಂಟ್ ಮೂಲಕ ಪ್ರವೇಶಾತಿ ನೀಡಲಾಗುತ್ತದೆ. ವಿದ್ಯಾರ್ಥಿಯು ಮೊದಲ ಅಲೋಟ್ಮೆಂಟ್ ನಲ್ಲಿ ಪಡೆದ ಸಂಸ್ಥೆಯನ್ನು ತಿರಸ್ಕರಿಸಿ ಎರಡನೇ ಅಲೋಟ್ಮೆಂಟ್ ಗೆ ಅರ್ಜಿ ಸಲ್ಲಿಸಬಹುದು.ಎರಡನೇ ಅಲೋಟ್ಮೆಂಟನ್ನು ತಿರಸ್ಕರಿಸಲಾಗುವುದಿಲ್ಲ.

## ಸ್ಪಾಟ್ ಅಲೋಟ್ಮೆಂಟ್ ಎಂದರೇನು?

ಜಾಮಿಯತುಲ್ ಹಿಂದ್ ನಿರ್ದೇಶಿಸುವ ಕೇಂದ್ರಕ್ಕೆ ಹೋಗಿ ವಿದ್ಯಾರ್ಥಿಯು ಹಾಲ್ ಟಿಕೆಟ್‌ನೊಂದಿಗೆ ನೇರವಾಗಿ ಬಂದು ಪ್ರವೇಶಾತಿ ಪಡೆಯುವ ವಿಧಾನವಾಗಿದೆ ಇದು. ಈ ಸೌಲಭ್ಯವು ಒಂದು ಮತ್ತು ಎರಡನೇ ಅಲೋಟ್ಮೆಂಟ್ ನಲ್ಲಿ ಸೀಟು ಪಡೆಯದ ವಿದ್ಯಾರ್ಥಿಗಳಿಗಾಗಿದೆ ಈ ಅವಕಾಶ. ಸೀಟುಗಳು ಬಾಕಿ ಇರುವ ಸಂಸ್ಥೆಗಳಿಗೆ ಅದಕ್ಕನುಗುಣವಾಗಿ ಸೀಟು ಹಂಚಲಾಗುತ್ತದೆ. ಮೊದಲು ಬರುವ ವಿದ್ಯಾರ್ಥಿಗಳಿಗಾಗಿದೆ ಮೊದಲ ಅವಕಾಶ.

## ಪ್ರಮುಖ ದಿನಾಂಕಗಳು

- ಅರ್ಜಿ ಸಲ್ಲಿಸುವಿಕೆಯ ಪ್ರಾರಂಭ : ಮಾರ್ಚ್ 26 ಗುರುವಾರ
- ಅರ್ಜಿ ಸಲ್ಲಿಸಲು ಕೊನೇಯ ದಿನಾಂಕ: ಏಪ್ರಿಲ್ 20
- JSAT ಪರೀಕ್ಷೆ: ಮೇ 2 ಶನಿವಾರ ಬೆಳಿಗ್ಗೆ 9:30 ರಿಂದ.

## ಹೆಲ್ಪ್‌ಡೆಸ್ಕ್

ವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ಸಹಾಯ ಮಾಡಲು ಜಾಮಿಯತುಲ್ ಹಿಂದ್‌ನಲ್ಲಿ ಹೆಲ್ಪ್ ಡೆಸ್ಕ್ ಕಾರ್ಯನಿರ್ವಹಿಸುತ್ತಿದೆ.

ಇವರನ್ನು 6235492844 ಎಂಬ ನಂಬರಿನಲ್ಲಿ ಸಂಪರ್ಕಿಸಬಹುದು. ಇದರ ಜೊತೆಗೆ,ಯುನಿಟ್ ಕೇಂದ್ರಗಳಲ್ಲಿ SYS ಮತ್ತು SSF ಸಮಿತಿಗಳು ಮತ್ತು ಜಾಮಿಯತುಲ್ ಹಿಂದ್ ಸಂಸ್ಥೆಗಳ ಘಟಕ ಕೇಂದ್ರಗಳಲ್ಲಿ ಸಹಾಯ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ.

جامعة الهند الإسلامية
JAMIATHUL HIND AL ISLAMIYYA
**Jamiathul Hind Al Islamiyya** | Calicut, India-673006
www.jamiathulhind.com, info@jamiathulhind.com |+91 **6235 492 844**, +495 **277 2844**

In Academic collaboration with